(ಇಂದು ದಿನಾಂಕಃ 05–12–2024 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಖ್ಯ ವಿಚಾರಣೆ ಃ ಶ್ರೀ ಆರ್ ಜಿ ಕೆ ವಕೀಲರಿಂದ ಃ-

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯ ನಾನೇ ಹೇಳಿ ಬರೆಸಿದ್ದು ಅದು ಸತ್ಯವಾಗಿರುತ್ತದೆ.

ಪಾಟೀಸವಾಲು **1** ನೇ ಪ್ರತಿವಾದಿ ಪರ ಃ ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದ ಃ -

ನಾನು ಅಣ್ಣಿಗೇರಿಯ ನಿವಾಸಿ ಎಂದರೆ ಸರಿ. ನಾನು ಧಾರವಾಡಕ್ಕೆ ಹೋಗಿ ಸಹಿಯನ್ನು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ಬಗ್ಗೆ ನನಗೆ ಯಾರು ಹೇಳಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ವಿವಾದ ನಡೆಯುತ್ತಾ ಇತ್ತು ಎಂದು ನುಡಿಯುತ್ತಾರೆ. ವಿವಾದ ನಡೆದ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿಲ್ಲ.

ದಾವಾ ಜಮೀನು ಅಂಬಿಗೇರಿಯಲ್ಲಿ ಬರುತ್ತದೆ. ಸಾಕ್ಷಿಯು ಮುಂದುವರೆದು ಅಲ್ಲಿ ದನವನ್ನು ಮೇಯಿಸಲು ನಾನು ಹೋಗುತ್ತೇನೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಸರ್ವೆ ಮತ್ತು ಕ್ಷೇತ್ರ ನನಗೆ ಗೊತ್ತಿಲ್ಲ. ದಾವಾ ಜಮೀನಿನ ಸಂಬಂದ ಎಷ್ಟು ವ್ಯಾಜ್ಯಗಳು ಚಾಲ್ತಿಯಲ್ಲಿ ಇರುತ್ತದೆ ಎಂದು ನನಗೆ ಮಾಹಿತಿ ಇಲ್ಲಾ.

1 ನೇ ಪ್ರತಿವಾದಿ ಬೇವಿನಕಟ್ಟಿ ರವರು ಅಣ್ಣಿಗೇರಿಯ ನಿವಾಸಿ ಎಂದರೆ ಸರಿ. ಸದರಿ ಬೇವಿನಕಟ್ಟಿ ರವರು ಇಂದಿನಿಂದ ಸುಮಾರು 75 ವರ್ಷಗಳ ಕಾಲ ದಾವಾ ಆಸ್ತಿಯ ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮರಡ್ಡಿ ರವರು ಇರುತ್ತಾರೆ ಬೇವಿನಕಟ್ಟಿ ರವರಿಗೆ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಮರಡ್ಡಿರವರು ಕಬ್ಜಾ ವಹಿವಾಟಿನಲ್ಲಿ ಇಟ್ಟುಕೊಂಡಿರುತ್ತಾರೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಆಸ್ತಿಯು ದಾವಾ ಆಸ್ತಿಯ ಲಗತ್ತು ಇರುತ್ತದೆ ಎಂದು ಹೇಳಲು ನನ್ನ ಆಸ್ತಿಯ ಸರ್ವೆ ಸಂಖ್ಯೆ, ಚಕ್ಕಂದಿ ಹೇಳಲು ನನಗೆ ಬರುವುದಿಲ್ಲ.

ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀಸವಾಲು **2** ನೇ ಪ್ರತಿವಾದಿ ಪರ ಃ ಶ್ರೀ ವೈ ಬಿ ಜೆ ವಕೀಲರಿಂದ ಃ -</u>

2 ನೇ ಪ್ರತಿವಾದಿ ಗೈರು ಹಾಜರಿದ್ದು ಯಾವುದೇ ಪ್ರತಿನಿಧಿ ಇಲ್ಲದೇ ಇದ್ದ ಕಾರಣ ಪಾಟೀಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

<u>ಮರು ವಿಚಾರಣೆ ಃ ಇಲ್ಲಾ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**